CONQUER
GENERAL
SEXUAL
DEBILITIES
WITH
SHAKTI
SUDHA

ನಾಂದ ಸಂಚಿಕೆ

Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 27 ಸಂಚಿಕೆ 240] ಗುರುವಾರ 8-6-44 [ಕಾಲಾಣೆ

TALK-A-TONE
Monthly Magazine
For Cine News & Views
Advertise
for better Business
Single copy 0-12-0
Enquire— D. Mahaadev
C/o Opera Talkies
Mysore

ಯೂರೋಪಿನ ಆಕ್ರಮಣ

ಬಹು ಕಾಲದಿಂದ ಯೋಚಿಸುತ್ತಿದ್ದ ಯೂರೋಪು ಆಕ್ರಮಣ ಕಾರ್ಯಾಚರಣೆಯು ಮಂಗಳವಾರ ಪ್ರಾತಃಕಾಲ ಪ್ರಾರಂಭವಾಯಿತು. ಮಿತ್ರರ ವಿಮಾನಗಳು ಕಲೆ, ಡಂಕರ್ಕಿನ ಮೇಲೆ ವಿಮಾನದಾಳಿ ಮಾಡುತ್ತ ಉತ್ತರ ಫ್ರಾನ್ಸಿನ ಮೇಲೆ ಪ್ಯಾರಾಷ್ಯೂಟುಗಳಿಂದ ಸೇನೆಗಳನ್ನು ಸೇನ್ ನದಿ ಮುಖದಲ್ಲಿ ಇಳಿಸಿದರು ಬ್ರಿಟಿಷರು ಈ ಸಮಾಚಾರವನ್ನು ಸಾರುವುದಕ್ಕೆ ಮುಂಚೆ ಜರ್ಮನರೇ ಸಾರಿದರು.

ಹಾಗೂ ಹೀಗೂ ಯೂರೋಪಿನ ಮುತ್ತಿಗೆ ಪ್ರಾರಂಭವಾಯಿತು. ಇದು ಬಾರಿ ಮುತ್ತಿಗೆಯೋ ಇಲ್ಲವೇ ಹಿಟ್ಲರನ್ನು ಮರುಳು ಮಾಡುವ ಮುತ್ತಿಗೆಯೋ ನೋಡಬೇಕು. ಇಷ್ಟು ಕಾಲ ತಡವಾಡಿದ್ದು ಯಾರು ಸಹಿಸಲಾರರು ರಷ್ಯಾದವರು ಒತ್ತಾಯ ಮಾಡುತ್ತಾ ಬಂದರು. ಈಗ ಇದು ಯಾರಿಗೂ ಇದು ಆಶ್ಚರ್ಯವನ್ನುಂಟು ಮಾಡುವುದಿಲ್ಲ. ಕಾದಿದ್ದು ಆಯಿತು. ಇನ್ನು ಪ್ರಪಂಚದ ದೃಷ್ಟಿಯು ಯೂರೋಪಿನ ಮೇಲಿದೆ.

ಮಿತ್ರರು ಫ್ರೆಂಚ್ ತೀರವನ್ನು ಚುನಾಯಿಸಿದ್ದು ಒಳ್ಳೆ ನಗರಕ್ಕೆ ಹದ್ದಿರ ದಾರಿಯೆಂದು. ಹತ್ತಿರ ದಾರಿಯೆಂದು ಸಂತೋಷಪಡುವಹಾಗಿಲ್ಲ. ಮಿಲಿಟರಿ ರೀತ್ಯಾ ನೋಡಲು ಕಷ್ಟವಾದ ಮಾರ್ಗ. ವನುಷ್ಯನ ಶಕ್ತಿ ಏಳಾರಿ ಕೋಟೆ ಕೊತ್ತಲೆಗಳನ್ನು ಕಟ್ಟಲಾಗಿದೆ. ಇವನ್ನು ಆಗಾಗ್ಗೆ ಬಲಪಡಿಸಿಕೊಂಡು ಬಂದಿರುತ್ತಾರೆ. ಅಲ್ಲದೆ ಈಚೆಗೆ ಇದನ್ನು ಮತ್ತಷ್ಟು ಭದ್ರಪಡಿಸಿರುವರು. ಮಿತ್ರರಿಗೆ ಡಿಯಪ್ ಜೆನ್ನಾಗಿ ಸಾಥ ಕಲಿಸಿದೆ. ಮಿತ್ರರು ನೌಕೆ ವಿಮಾನ ಇವುಗಳ ಸಹಾಯದಿಂದ ಈಗ ತಮಗೆ ಬೇಕಾದ ಯುದ್ಧಸಾಮಗ್ರಿಗಳನ್ನು ಬಲಪಡಿಸಿಕೊಳ್ಳಲು ಕಲಿತಿರುವರು. ಈಗಾಗಲೇ ಮಿತ್ರರು 12 ಮೈಲಿ ಮುಂದುವರಿದು ಯುದ್ಧಮಾಡುವುದನ್ನು ನೋಡಿದರೆ, ಇವರು ಎಷ್ಟು ಒಲವಾಗಿರುತ್ತಾರೆಂದು ಗೊತ್ತಾಗುವುದು. ಇದೇ ಆಶೆ ಇಟ್ಟುಕೊಳ್ಳುವಹಾಗಿಲ್ಲ. ಹಿಟ್ಲರ ತನ್ನ ರಾಜ್ಯದಲ್ಲಿ ಬಲವಾಗಿರುವನು. ಅವನನ್ನು ಸೋಲಿಸಲು ಬಹು ಕಷ್ಟಪಡಬೇಕು. ಮಿತ್ರರಿಗೆ ಈಗ ಬೇಕಾದಷ್ಟು ಅನುಕೂಲವಿದೆ, ಯುದ್ಧ ಸಾಮಗ್ರಿಗಳು ಹೇರಳವಾಗಿವೆ, ಅಲ್ಲದೆ ಸ್ವದೇಶಿಗಳು ಸಹಾಯ ಮಾಡುವರಾಗಿರುವರು. ಮೂರು ನಾಲ್ಕು ಕಡೆಗಳಿಂದ ಮಿತ್ರರು ನುಗ್ಗಿದರೆ ಜಯವು ಬಲುಬೇಗನೆ ಲಭಿಸುವುದರಲ್ಲಿ ಸಂದೇಹವಿಲ್ಲ.

ಸೇನ್ ನದಿ ಮುಖಜದಲ್ಲಿ ಮಿತ್ರರು ಕಾಲಿಟ್ಟರು. ಇಲ್ಲಿಂದ ಪ್ಯಾರಿಸ್ ನಗರಕ್ಕೆ ಸಮೀಪವಾಗಿದೆ. ಪ್ಯಾರಿಸ್ ನಗರವು ಫ್ರಾನ್ಸಿನ ಮಧ್ಯದಲ್ಲಿದೆ. ಜನರಲ್ ಡಿಗಾಲ್ ಈಗ ಲಂಡನ್ನಿಗೆ ಒಂದಿರುತ್ತಾರೆ- ಇವರು ಒಂದು ಭಾಷಣವನ್ನು ತನ್ನ ಫ್ರೆಂಚ್ ಜನಗಳಿಗೆ ಕೊಡುವಾಗಿರುವರು. ರಷ್ಯನರು ಬೇಸಿಗೆ ಕದನ ಹೂಡುವರಾಗಿರುವರು, ಈಗ ಹಿಟ್ಲರನಿಗೆ ಪಿಕಲಾಟಕ್ಕೆ ಬಿಂತು. ಒಂದು ಕಡೆ ರಷ್ಯನರು, ಇನ್ನೊಂದು ಕಡೆ ಯುಗೋಸ್ಲೋವಿಯಾದವರು, ಮತ್ತೊಂದು ಕಡೆ ಇಟಲಿಯವರು, ಮಗದೊಂದು ಕಡೆ (ಬಂದಲ್ಲ, ಹಲವು) ಫ್ರಾನ್ಸ್‌ನಲ್ಲಿ ಈ ಕಡೆಗಳಲ್ಲಿ ಸಿದ್ಧಮಾಡಬೇಕಾಯಿತು. ಈ ಯುದ್ಧವು ಈಗತಾನೇ ಪ್ರಾರಂಭವಾಗಿದೆ, ಏನನ್ನೂ ಹೇಳುವುದಕ್ಕೆ ಆಗುವುದಿಲ್ಲ. ಎಲ್ಲರೂ ಹೇಳುವುದು ಇಷ್ಟೇ— "ಜರ್ಮನಿ—ಬಿಂಗ್ಲೋ ಅಮೆರಿಕನ್' ಯುದ್ಧ ಹೂಡಿತು. ಇದರಿಂದ ಅನೇಕ ಸಂಗತಿಗಳು ಜರುಗುವುವು."

ಪ್ರಜಾ ಪ್ರತಿನಿಧಿ ಸಭೆ

[ಸ್ವಂ. ಸು] ಜೂನ್ 6

ತಿಂಗಳಿಗೆ 50 ರೂ. ಗೆ ನಿವೃತ್ತಿ ಪೆನ್ಷನ್ ಪಡೆಯುವವರು ಬೇರೆ ಕಡೆ ಕೆಲಸಕ್ಕೆ ಸೇರಿದರೆ ಅವರಿಗೆ ಪೆನ್ಷನ್ ವಜಾ ಆಗಬೇಕೆಂದು ಬಂದಿದ್ದ ಕಾಂಗ್ರೆಸ್ಸಿಸವರ ನಿರ್ಣಯವನ್ನು ಅಧ್ಯಕ್ಷರು ತಳ್ಳಿಹಾಕಿದರು.

ಜನವಾಣಿ ಸಂಪಾದಕರು ವಿಷಾದ ಸೂಚಿಸಬೇಕೆಂದು ಪ್ರಿವಿಲೆಜ್ ಕಮಿಡಿಯವರು ನಿರ್ಣಯಮಾಡಿದರು.

ದೇಶದಲ್ಲಿ 1119402 ಅದಿಕರ್ನಾಟಕರಿದ್ದಾರೆ, ಹಾಸ್ಟಲ್, ಬೋರ್ಡಿಂಗ್ ಹೋಂಗಳಲ್ಲಿ ಇವರಿಂದ ಯಾವ ರೂಪು ಮು ತೆಗೆದುಕೊಳ್ಳುವುದಿಲ್ಲ. ಪ್ರಸ್ತಕ ಬಟ್ಟೆ, ಹಾಸಿಗೆ ಫರ್ನಿಚರ್ ಸಹ ವಿಷ ತ್ಯಾಗಿ ಕೊಡುತ್ತಿದೆ. ಅಡ್ಮಿಷ್ಷ ಫೀ ಟ್ಯೂಷ್ಷ ಫೀ ಮತ್ತು ಪರೀಕ್ಷೆಗೆ ಕೊಡಬೇಕಾದ ಫೀ ಇಲ್ಲ ಎಂದು ಸರ್ಕಾರದವರು ಶ್ರೀ ಬಸವಯ್ಯನವರ ಪ್ರಶ್ನೆಗೆ ಉತ್ತರವಿತ್ತರು ಅಲ್ಲದೆ ಇವರಿಗೆ 6 ಕಡೆ ಫ್ರೀ ಹಾಸ್ಟಲ್ ಇದೆ, 34 ಗ್ರಾಂಟ್-ಇನ್-ಏಡ್ ಹಾಸ್ಟಲುಗಳಿವೆ ಎಂದು ಸಹ ಹೇಳಿದರು.

ದೇಶದಲ್ಲಿ 444 ಮಿಡಲ್ ಸ್ಕೂಲುಗಳಿವೆ, ಇದರಲ್ಲಿ 55 ಉರ್ದು ಮಿಡಲ್ ಸ್ಕೂಲುಗಳು, ಮುಸ್ಲಿಂ ಮಿಡಲ್ ಸ್ಕೂಲಿನಲ್ಲಿ ಸ್ಕ್ರೀಯರನ್ನು ನೇಮಿಸಿಕೊಳ್ಳುವುದಕ್ಕೆ ಗ್ರಾಜುಏಟ್ಸ್ ಮುಸ್ಲಿಂ ಅಡ್ವೈಜರಿ ಬೋರ್ಡಿನವರು ಸಲಹೆ ಮಾಡಿರುತ್ತಾರೆಂದು ಸರ್ಕಾರಿ ಉತ್ತರ ಬಂತು.

ವಿದ್ಯುಚ್ಛಕ್ತಿ ಸರಬರಾಯಿ ಇಲ್ಲದೆ ಕೆಲಸ ನಿಂತಿದೆ, ಕೂಲಿಕಾರರಿಗೆ ಬಹಳ ತೊಂದರೆ ಇವರಿಗೆ ಕೂಲಿ ಕಲ್ಪಿಸಿಕೊಡಬೇಕೆಂದು ಶ್ರೀ ರಾಜಗೋಪಾಲಯ್ಯಂಗಾರರು ಅರಿಕೆ ಮಾಡಿಕೊಂಡರು

ಈಗ ಕೆಲಸ ನಿಂತಿರುವ ಕಾರ್ಖಾನೆ ಕೂಲಿಗಾರರಿಗೆ ಆರ್ಧ ಸಂಬಳವನ್ನಾದರೂ ಕೊಡಬೇಕೆಂದು ಶ್ರೀ ಭೂಪಾಲಂ ರವರು ಕೇಳಿಕೊಂಡರು.

ದ್ವೇಶದಲ್ಲಿ 80 ಸಾವಿರ ಕಾರ್ಮಿಕರಿರುವರು. ಇವರಲ್ಲಿ 26000 ಮಂದಿ ಚಿನ್ನದ ಗಣಿಗಳಲ್ಲಿರುತ್ತಾರೆ. 9200 ಮಂದಿ ಸರ್ಕಾರಿ ಕಾರ್ಖಾನೆಯಲ್ಲಿರುತ್ತಾರೆ. ಕೂಲಿಗಾರರಿಗೆಲ್ಲಾ ಇತರ ಕಡೆ ಕೆಲಸ ಕೊಡಲು ವಿಸ್ತಾರವಾಗಿ ಮಾಡಿದೆ. ಹಂಗಾಮಿಯವರಿಗೆ ಅಡ್ವಾನ್ಸ್ ಕೊಡಲಾಗುವುದು. ಶುಟ್ಟ ಭತ್ಯೆ ಈಗಲೇ ಕೊಡುತ್ತೇನೆ. ಸರ್ಕಾರದವರು ಕೈಲಾದ ಸಹಾಯ ಮಾಡುತ್ತಿರುತ್ತೇವೆಂದು ಲೇಬರ್ ಕಮಿಷನರು ಹೇಳಿದರು.

ಶ್ರೀ ರೆಡ್ಡಿಯವರು ಕಾರ್ಮಿಕರಲ್ಲಿ 40 ಸಾವಿರದವರೆಗೆ ಕೆಲಸವಿಲ್ಲವೆಂದರು. ಅಧ್ಯಕ್ಷರು ಎಲ್ಲಾ ಕಾರ್ಖಾನೆಗಳೂ ಕೆಲಸ ಮಾಡುತ್ತಿರುತ್ತಾರೆ. ಕೇವಲ ಶೇಕಡ 10 ರಂತೆ ಕೆಲಸ ಮಾಡುತ್ತಿಲ್ಲವೆಂದರು.

ಇದಾಗ ಕಾಲದಲ್ಲಿ ಸರ್ಕಾರದವರು ಸಾರ್ವಜನಿಕರೂ ಸಹ ಹಣಸಹಾಯ ಮಾಡಬೇಕೆಂದು ಶ್ರೀ ದೇವರಾಜೇ ಅರಸು ನವರು ಹೇಳಿದರು.

ಕಾರ್ಖಾನೆಗಳ ವಿಷಯದಲ್ಲಿ ಆನುತಾಪ ತೋರಿಸಿದರೆ ಸಾಲದು, ಧಾರಾಳವಾಗಿ

ಸಹಾಯಮಾಡಬೇಕೆಂದು ಶ್ರೀ ನವರತ್ನ ರಾಮರಾಯರು ಹೇಳಿದರು.

ಕಾರ್ಮಿಕರಿಗೆ ಲಿವಿಂಗ್ ವೇಜಸ್ ಕೊಡಬೇಕೆಂದು ಶ್ರೀ ರಾಮರಾಯರು ಹೇಳಿದರು.

ಪರಿಹಾರ ಕಾರ್ಯಕ್ಕೆ 10 ಲಕ್ಷ ರೂಪಾಯಿ ಕೊಟ್ಟರೆ ಇದರಿಂದ ಕಾರ್ಮಿಕರಿಗೆ ತುಂಬಾ ಸಹಾಯ ಮಾಡಿದಂತಾಗುವುದೆಂದು ಶ್ರೀ ರಾಜಗೋಪಾಲಯ್ಯಂಗಾರ್ಯರು ಹೇಳಿದರು.

ಜೂನ್ ತಿಂಗಳ ಅಂತ್ಯದವರೆಗೆ ಪರಿಹಾರ ಕೊಡಲಾಗುವುದು, ಸರ್ಕಾರೀ ಕಾರ್ಖಾನೆಗಳಲ್ಲಿ ಕೊಡುವ ಅಡ್ವಾನ್ಸು ವಾಪಸ್ ಕೊಡಬೇಕಾಗಿಲ್ಲ, ಕೋಲಾರದ ಗಣಿಯಲ್ಲಿ ಶೇಂದಿ ಅಂಗಡಿ ಮುಚ್ಚಿಸುತ್ತೇವೆ- ಹೈದರಾಬಾದಿನಲ್ಲಿ ಕೂಲಿಗಾರರು ಬೇಕಾಗಿರುತ್ತಾರೆ—ಹೀಗೆಂದು ಶ್ರೀ ಗುಂಡಪ್ಪಗೌಡರು ಉತ್ತರ ಎತ್ತರು.

ಮೈಸೂರು ವೈಶ್ಯ ಪತ್ರಿಕೆ

ಉತ್ತಮ ಸಚಿತ್ರ ಕನ್ನಡ ತೆಲುಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ಈಗಿನ ವಾರ್ಷಿಕ ಚಂದಾ ರೂ. 3-0-0

ಬಿಡಿ ಪ್ರತಿ 4 ಆಣೆ.

ಹಿಗಿನ್‌ಬಾಥಮ್ಸ್ ರೈಲ್ವೆ ಬುಕ್‌ಸ್ಟಾಲ ಸೆಕ್ಲಿಯೂ ಪತ್ರಿಕೆಯು ದೊರೆಯುತ್ತೆ.

ಕಾರ್ಯಾಲಯ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ, ಮೈಸೂರು

ಅಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು.

5 ನೇ ವಾರ OPERA

Chenchulakshmi

(Telugu)

— with —

Nagiah. Kamala Kotnis

Narayana Rao

ಚಂಚುಲಕ್ಷ್ಮಿ

ಅಮೋಘ ತೆಲಗು ಚಿತ್ರ———

ಪ್ರತಿ ದಿವಸ 2 ಆಟಗಳು— 7 ಗಂಟೆಗೆ ಮತ್ತು 10 ಗಂಟೆಗೆ

ಶನಿವಾರ, ಭಾನುವಾರ ಮ್ಯಾಟಿನಿ 4 ಗಂಟೆಗೆ

ಶೀಘ್ರದಲ್ಲೇ ಬರುತ್ತೆ 'ಭರ್ತೃಹರಿ' [ತಮಿಳು]

ಶಾಮ, ಜಯಮ್ಮ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ

ಕಾಳಿ ಎನ್. ರತ್ನ ಪಾತ್ರವಹಿಸಿರುವರು.

11th Triumphant Week

ನೇ ಅಮೋಘ ವಾರ

Ranjit Talkies — ರಣಜಿತ್

TANSEN ತಾನ್‌ಸೆನ್

ಪ್ರತಿ ದಿನ 2 ಆಟಗಳು ಮಾತ್ರ— ಮ್ಯಾಟಿನಿ 4 ಗಂಟೆಗೆ, ರಾತ್ರಿ ಆಟ 10-15 ಕ್ಕೆ

ಶನಿವಾರ ಭಾನುವಾರಗಳಲ್ಲಿ ಎಂದಿನಂತೆ ಜೆಳಿಗ್ಗೆ ಪ್ರದರ್ಶನ.

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಆಕ್ಷೇಪಕರವಾದ ಪದಾರ್ಥವೂ ಸೇರಿಲ್ಲ. ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವ ಸ್ಥಾನಗಳಲ್ಲಿಯೂ ದೇವರ ಪೂಜೆಗೂ ಔಷಧಗಳಿಗೂ, ತಿಂಡಿ ಪದಾರ್ಥಗಳಿಗೂ ಸುಖಸುಕೋಷ ಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ

'ಓಂ' ಬ್ರಾಂಡ್ ಕೇಸರಿ

ವಲ್ಲಭದಾಸ ತೇಜಪಾಲ್

೧೪ ಗೋವಿಂದಪ್ಪ ನಾಯಕ್ ಸ್ಟ್ರೀಟ್, ಮದರಾಸು

ಮೈಸೂರು ಈದಿಗಾ ಎಕ್ಸ್‌ಟೆನ್‌ಷನ್ನಿನಲ್ಲಿರುವ
ಶ್ರೀ ಶ್ರೀನಿವಾಸ ಸ್ವಾಮಿಯವರಿಗೆ

ಇದೇ ತಾರಣಸಂವತ್ಸರದ ವೃಷಭಮಾಸ ತೀದಿ 27 ರ ಲಾಗಾಯಿತು ಕೆಳಗೆ ಕಂಡ ಪ್ರಕಾರ ವರ್ಷೋತ್ಸವವು ನಡೆಸಲ್ಪಡುತ್ತಾಗಿ ಭಗವದ್ಭಕ್ತರೆಲ್ಲರೂ ದಯಮಾಡಿಸಿ ಕೃತಾರ್ಥರಾಗಬೇಕೆಂದು ದೇವಸ್ಥಾನದ ಆಡಳಿತಗಾರರು ಪ್ರಾರ್ಥಿಸಿರುತ್ತಾರೆ

— ಕಾರ್ಯಕ್ರಮ. —

9—6—44 ಶುಕ್ರವಾರ ಅಂಕುರಾರ್ಪಣ, ಪಿ. ಆರ್. ಕಾಳೋಜಿರಾಯರಿಂದ

10—6—44 ಶನಿವಾರ ಪ್ರಾತಃಕಾಲ ತಿರುಮಂಜನ, ಮತ್ತು ಸಾಯಂಕಾಲ ಕಲ್ಯಾಣೋತ್ಸವ ಟ. ಪಿ ಕೋದಂಡರಾಮಪಿಳ್ಳೆಯವರಿಂದ

11—6—44 ಭಾನುವಾರ ಪ್ರಾತಃಕಾಲ ತಿರುಮಂಜನ, ದಿವ್ಯಪ್ರಬಂಧಪಾರಾಯಣ ಶಾತ್ತುಮೊರೈ, ಸಾಯಂಕಾಲ 5 ಘಂಟೆಗೆ ವೀಧ್ಯುತ್ಸವ

12—6—44 ಸೋಮವಾರ ವೇದಪಾರಾಯಣ ಶಾತ್ತುಮೊರೈ

13—6—44 ಮಂಗಳವಾರ ಶಯನೋತ್ಸವ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಅಕ್ಷಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

ಫಾರ್ಮಸಿ, ೧೦೬೭, ಚಾಮರಾಜಪುರಂ ಮೈಸೂರು.

ವಿವಿಧ ಬಟ್ಟೆಗಳು

ಅಂದವಾದ ಹೊಲಿಗೆ

ರೆಡಿ ಮೇಡ್ ಡ್ರೆಸ್

ಇವುಗಳಿಗೆ ನಮ್ಮಲ್ಲಿ ಬನ್ನಿ

ಮಹಾಲಕ್ಷ್ಮಿ ಹಾಲ್

ಸಯ್ಯಾಜಿ ರಾವ್ ರೋಡ್, ಮೈಸೂರು

Edited Printed and published by M. S. Krishna Rao at the Satyavadi Press, Chamara Vihar Mysore